**ಶ್ರೀ ಬಿ.ಸಿ.ಪಾಟೀಲ್** : Infrastructure ಇದೆ ಎಂದು ನಿಮ್ಮ DDPI ರವರು ಎಲ್ಲರೂ ವರದಿ ಕೊಟ್ಟರು. ಹೀಗಾದರೂ ಕೂಡ ನೀವು ಕೊಡಲಿಲ್ಲ.

**ಅಧ್ಯಕ್ಷರು** : ಈ ಪ್ರಶ್ನೆಯನ್ನು ಇಲ್ಲಿಗೆ ಮುಕ್ತಾಯ ಮಾಡಿದೆ. ಮುಂದಿನ ಪ್ರಶ್ನೆ ಸತ್ಯನಾರಾಯಣರವರು ಕೇಳಿ. ನೀವು ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಕೇಳಿ.

**(ಗೊಂದಲ)**

**ಶ್ರೀ ಬಿ.ಸಿ.ಪಾಟೀಲ್** : ವೈಯಕ್ತಿಕವಾಗಿ ಭೇಟಿ ಮಾಡಿ ಕೇಳಿದ್ದರೂ ಆಗಿಲ್ಲ. ಅದಕ್ಕಾಗಿ ಇಲ್ಲಿ ಕೇಳಿದ್ದೇವೆ.

**ಅಧ್ಯಕ್ಷರು** : ನಿಮಗೆ ನಾನು ಅನುಮತಿ ಕೊಟ್ಟಿಲ್ಲ ದಯವಿಟ್ಟು ಕುಳಿತುಕೊಳ್ಳಿ. ಸತ್ಯನಾರಾಯಣರವರನ್ನು ಕರೆದಿದ್ದೇನೆ.

**ಶ್ರೀ ಎಸ್. ಮುನಿರಾಜು** : ಪೀಣ್ಯಾದಲ್ಲಿರುವುದರಲ್ಲಿ ಬಹಳ ಒತ್ತಡವಿದೆ. ಪೀಣ್ಯಾದಲ್ಲಿ ಕಾಲೇಜು ಇದ್ದರೂ ಸಹ ಇಲ್ಲಿಂದ ಹೋಗುವ ಸುಮಾರು 800–900 ವಿದ್ಯಾರ್ಥಿಗಳಿಗೆ ಅಲ್ಲಿ accommodation ಆಗುತ್ತಿಲ್ಲ. ಹೊಸದಾಗಿ ಕಾಲೇಜು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸದೇ ಇರುವುದೆಂದು ಹೇಳಿದ್ದಾರೆ. ದಯಮಾಡಿ ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಒತ್ತಾಯ ಮಾಡುವುದು ಏನೆಂದರೆ, ದಯಮಾಡಿ ಈ ವರ್ಷದಲ್ಲಿ ಮೊದಲನೆ ಪಿ.ಯು.ಸಿ.ಯನ್ನು ಹೆಗ್ಗನಹಳ್ಳಿ ಮತ್ತು ದಾಸರಹಳ್ಳಿಯಲ್ಲಿ ಪ್ರಾರಂಭಿಸಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : Ruling Party ಯ MLA ಗಳಿಗೆ ಈ ಕತೆ ಆದರೆ ವಿರೋಧ ಪಕ್ಷದವರ ಗತಿ ಏನು ಸ್ವಾಮಿ?

**ಅಧ್ಯಕ್ಷರು** : ಆಯಿತು ನೀವು ಕುಳಿತುಕೊಳ್ಳಿ. Ruling Party ಯವರನ್ನು ಅವರು ನೋಡಿಕೊಳ್ಳುತ್ತಾರೆ.

**ಸರ್ಕಾರಿ ಮಹಿಳಾ ಕಾಲೇಜು ಕಟ್ಟಡ ನಿರ್ಮಾಣದ ಬಗ್ಗೆ**

**38 (04) ಶ್ರೀ ಸತ್ಯನಾರಾಯಣ (ಚಾಮುಂಡೇಶ್ವರಿ)** : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ವಿಜಯನಗರ ಸರ್ಕಾರಿ ಮಹಿಳಾ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೆ ಬಹಳಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗೆ ಎಷ್ಟು ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ;

ಇ) ಈ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಎಂದು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

**ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :**

ಅ) ಬಂದಿದೆ.

ಆ) ರೂ.100.00 ಲಕ್ಷಗಳು

ಇ) ಹಣಕಾಸಿನ ಲಭ್ಯತೆಯನ್ನಾಧರಿಸಿ ಮುಂದಿನ ಸಾಲುಗಳಲ್ಲಿ ಹಂತ ಹಂತವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

**ಶ್ರೀ ಎಂ. ಸತ್ಯನಾರಾಯಣ :** ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಈಗಾಗಲೇ ಮಹಿಳಾ ಕಾಲೇಜು ಪ್ರಾರಂಭಿಸಿ ನಾಲ್ಕು ವರ್ಷವಾಗಿದೆ. ಆ ಜಾಗದಲ್ಲಿ ವಾಣಿಜ್ಯ ಸಂಕೀರ್ಣದಲ್ಲಿ ಬರೀ ಎರಡು ದೊಡ್ಡ ಹಾಲ್‌ನಲ್ಲಿ ಓಪನ್ ಮಾಡಿದ್ದಾರೆ. ಶೌಚಾಲಯದ ವ್ಯವಸ್ಥೆಯಿಲ್ಲ. ಅಲ್ಲಿ ಕ್ರೀಡಾ ಮೈದಾನ ಇಲ್ಲ. ಸುತ್ತಾ ಮುತ್ತಾ ಅಂಗಡಿಗಳು ಇವೆ. ನಾನು ಚುನಾಯಿತನಾದಾಗಿನಿಂದಲೂ ಅದಕ್ಕೊಂದು ಕಟ್ಟಡ ಬೇಕೆಂದು, ಅದಕ್ಕೆ ಜಾಗ ಒದಗಿಸಬೇಕೆಂದು, ಒತ್ತಾಯ ತರುತ್ತಿದ್ದೇನೆ. ಎಲ್ಲಾ ಒದಗಿಸಿದ್ದೇವೆ. ಆದರೂ ಕಟ್ಟಡದ ಕೆಲಸ ಶುರುವಾಗಲಿಲ್ಲ. ಕಾಲೇಜು ಹತ್ತಿರ ಹೋಗಿ ಹೆಣ್ಣು ಮಕ್ಕಳ ಗೋಳನ್ನು ನೋಡುವುದಕ್ಕಾಗುವುದಿಲ್ಲ. ದಯವಿಟ್ಟು ಈ ಕೆಲಸ ತುರ್ತುಗತಿಯಲ್ಲಿ ಆಗಬೇಕು. ಹಣ ಬಂದ ಹಾಗೆ ಮಾಡಿಕೊಡುತ್ತೇವೆಂದು ಏನು ಉತ್ತರಿಸಿದ್ದೀರಿ, ಅದು ಸರಿಯಿಲ್ಲ. ಅದು ತ್ವರಿತಗತಿಯಲ್ಲಿ ಆಗಿ ಅನುಕೂಲವಾಗಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ :** ಕಟ್ಟಡ ಏಕೆ ಪ್ರಾರಂಭವಾಗಿಲ್ಲ ಎನ್ನುವುದರ ಬಗ್ಗೆ ಹೇಳುತ್ತಿದ್ದೇನೆ.

**ಅಧ್ಯಕ್ಷರು :** ಇದು ಮೈಸೂರಿನ ವಿಜಯನಗರ ಕಾಲೇಜಿನ ವಿಷಯಕ್ಕೆ ಸಂಬಂಧಪಟ್ಟಿದ್ದು. ಪ್ರತಿಯೊಂದಕ್ಕೂ ಕೇಳಿದರೆ ಅಲೊ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ :** ನಮ್ಮ ಮೂಲ ಪ್ರಶ್ನೆ ಏನೆಂದರೆ,

**ಅಧ್ಯಕ್ಷರು :** ಅವರು ಕೇಳಿರುವ ಪ್ರಶ್ನೆ ಬಹಳ ನಿರ್ದಿಷ್ಟವಾಗಿ ಕೇಳಿದ್ದಾರೆ ಮೈಸೂರಿನ ವಿಜಯನಗರ ಸರ್ಕಾರಿ ಮಹಿಳಾ ಕಾಲೇಜಿಗೆ

ಅನುದಾನ ಬಿಡುಗಡೆಯಾಗಿಲ್ಲದಿರುವುದರ ಬಗ್ಗೆ ಕೇಳಿದ್ದಾರೆ, ಅದಕ್ಕೆ ಅವರು ಉತ್ತರಿಸುತ್ತಾರೆ. ನೀವು ಎಲ್ಲವನ್ನೂ ತೆಗೆದುಕೊಂಡು ಹೇಳಿದರೆ ಅವರ ಹತ್ತಿರ ಮಾಹಿತಿ ಇಲ್ಲ ಉನ್ನತ ಶಿಕ್ಷಣ ಸಚಿವರು ಈಗ ಇಲ್ಲಿ ಇಲ್ಲ. ಅವರ ಪರವಾಗಿ ಉತ್ತರಿಸುತ್ತಿದ್ದಾರೆ. ಉನ್ನತ ಶಿಕ್ಷಣ ಸಚಿವರು ಇಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ)** : ಮಾನ್ಯ ಸತ್ಯನಾರಾಯಣರವರು, ಮೈಸೂರಿನಲ್ಲಿ 2005–06 ರಲ್ಲಿ ವಿಜಯನಗರ ಸರ್ಕಾರಿ ಮಹಿಳಾ ಕಾಲೇಜು ಪ್ರಾರಂಭವಾಗಿದೆ. 360 ರಷ್ಟು ವಿದ್ಯಾರ್ಥಿಗಳು ಇದ್ದಾರೆ. ಅಲ್ಲಿ BA., B.Com., BBM., Course ಗಳು ನಡೆಯುತ್ತಿವೆ. ಅಲ್ಲಿ ಕಟ್ಟಡ ಇಲ್ಲ ಎನ್ನುವುದನ್ನು ಹೇಳಿದ್ದಾರೆ. ನಿಶ್ಚಿತವಾಗಿ ನಾನು ಅದನ್ನು ಒಪ್ಪುತ್ತೇನೆ. MUDA ದ building ಗಳಲ್ಲಿ ಈಗ ನಡೆಸುತ್ತಿದ್ದಾರೆ. ಆದರೆ, ಸರ್ಕಾರ ಈಗಾಗಲೇ ಒಂದು ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದೆ. ಸ್ಥಳದ ಅಭಾವದಿಂದಾಗಿ ತೊಂದರೆಯಾಯಿತು. ಈಗ MUDA ದಿಂದ ಜಾಗ ತೆಗೆದುಕೊಂಡಿದ್ದು ಇದಕ್ಕಾಗಿ 30 ಲಕ್ಷ ರೂಪಾಯಿ ಖರ್ಚಾಗಿದೆ. 70 ಲಕ್ಷ ರೂಪಾಯಿ ಹಣ ಇದೆ. PWD ಯವರಿಗೆ ನಾವು ಕೆಲಸ ಪ್ರಾರಂಭಿಸುವುದಕ್ಕೆ ಸೂಚಿಸಿದ್ದೇವೆ. ಹೀಗಾಗಿ ನಾನು ಶಾಸಕರಲ್ಲಿ ವಿನಂತಿಸುವುದೇನೆಂದರೆ, ನಾನು PWD ಯ ಅಧಿಕಾರಿಗಳಿಗೂ ಸೂಚಿಸುತ್ತೇವೆ. ಅವರು ತಕ್ಷಣದಲ್ಲಿ 70 ಲಕ್ಷ ರೂಪಾಯಿಯಲ್ಲಿ ಕೆಲಸ ಶುರು ಮಾಡಿದರೆ, ಉಳಿದ ಹಣವನ್ನು ಅದರ ಖರ್ಚನ್ನು ಆಧರಿಸಿ ಅಗತ್ಯವಿರುವಷ್ಟು ಪೂರೈಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸತ್ಯನಾರಾಯಣ** : MUDA ದಿಂದ hand over ಆಗಿ ಒಂದು ವರ್ಷಗಳಾಗಿದೆ. ಹಣ ಬಿಡುಗಡೆಯಾಗಿ ಒಂದು ವರ್ಷವಾಗಿದೆ. ತಮ್ಮ ಅನುಮತಿಯಿಲ್ಲದೆ ಕೆಲಸ ಶುರು ಮಾಡಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ನಾವು PWD ಯವರಿಗೆ ತಕ್ಷಣ ಕೆಲಸ ಪ್ರಾರಂಭಿಸಬೇಕೆಂದು ಸೂಚಿಸುತ್ತೇವೆ. 70 ಲಕ್ಷ ಹಣ ಖರ್ಚಾದ ನಂತರದಲ್ಲಿ ವಿವಿಧ ಹಂತದಲ್ಲಿ ಉಳಿದ ಹಣ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು** : ಮುಂದಿನ ಪ್ರಶ್ನೆ ಶಿವಶಂಕರರೆಡ್ಡಿಯವರ ಪರವಾಗಿ ಸಂಪಂಗಿಯವರು ಪ್ರಶ್ನೆ ಕೇಳಿ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಕಾಲೇಜು ಕಟ್ಟಡಗಳಿಗೆ ಹಣ ಬಿಡುಗಡೆ ಮಾಡಿದ್ದಾರೆ. ಆದರೆ ಕಟ್ಟಡ ಪ್ರಾರಂಭಿಸುತ್ತಿಲ್ಲ. ಅದಕ್ಕೆ clarification ಕೇಳಬೇಕೋ ಬೇಡವೋ?

**ಅಧ್ಯಕ್ಷರು** : Please ಕುಳಿತುಕೊಳ್ಳಿ. ನಾನು ಬೇರೆಯವರನ್ನು ಕರೆದಿದ್ದೇನೆ. ತಾವು ಬಜೆಟ್ ಭಾಷಣದಲ್ಲಿ ಹೇಳಿ. ಕುಳಿತುಕೊಳ್ಳಿ.

**ಶ್ರೀ ಹೆಚ್.ಸಿ.ಬಾಲಕೃಷ್ಣ** : ಪ್ರಶ್ನೋತ್ತರದಲ್ಲಿ ಅವರಿಗೆ ಕೇಳುವುದಕ್ಕೆ ಅವಕಾಶ ಕೊಡಿ. ಎಲ್ಲಾ ಕಡೆ ಹಣ ಬಿಡುಗಡೆಯಾಗಿದೆ. ಆದರೆ ಕಟ್ಟಡದ ಕೆಲಸ ಪ್ರಾರಂಭಿಸಿಲ್ಲ, ಇದಕ್ಕೇನು ಕಾರಣ ಎಂದು ಅವರು ಕೇಳುತ್ತಿದ್ದಾರೆ.

**ಅಧ್ಯಕ್ಷರು** : ಪ್ರಶ್ನೋತ್ತರದಲ್ಲಿ ಎರಡೇ ಪ್ರಶ್ನೆ. ನೀವು ಬೇರೆ ರೂಪದಲ್ಲಿ ಕೇಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಇದು ನೇರವಾಗಿ ವಿಜಯನಗರ ಕಾಲೇಜಿಗೆ ಸಂಬಂಧಪಟ್ಟಿರುವ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಆದರೂ ಸಹ ನನ್ನ ಕ್ಷೇತ್ರವೂ ಒಳಗೊಂಡಂತೆ ಎಲ್ಲಾ ಶಾಸಕರ ಭಾವನೆ ಏನು ಇದೆ ಎಂದರೆ, ನಾವು ಹಣ ಕೊಟ್ಟಿದ್ದೇವೆ, ಕೆಲಸ ಪ್ರಾರಂಭವಾಗಿಲ್ಲ ಎನ್ನುವ ಸಾರ್ವತ್ರಿಕ ಭಾವನೆ ಏನು ಇದೆ, ಈಗಾಗಲೇ ನಾವು 91 ಕೋಟಿ ಕೊಟ್ಟಿರುವುದು ಹೌದು. ಎಲ್ಲಾ ಕಡೆ ಕಾಲೇಜು ಜಾಗದಲ್ಲಿ ಬಿಲ್ಡಿಂಗ್ ಮಾಡುವುದಕ್ಕೆ ಸೂಚಿಸಿರುವುದು ಹೌದು. ಕೆಲವು ಕಡೆ ಸ್ಥಳದ ಅಭಾವವಿದೆ, ಅಲ್ಲಿ ಅದನ್ನು ಬಗೆಹರಿಸುವುದಕ್ಕೆ ಹೇಳಿದ್ದೇವೆ. ಸ್ಥಳದ ತೊಂದರೆಯಿಲ್ಲದಿರುವ ಕಡೆಯಲ್ಲಿಯೂ ಸಹ ಈಗ ನಾವು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿರುವುದರಿಂದ PWD ಯವರಿಗೆ ತಕ್ಷಣವೇ ಎಲ್ಲಾ ಕಡೆ ಕೆಲಸ ಪ್ರಾರಂಭಿಸಿ ಎಂದು ಸೂಚಿಸಿರುತ್ತೇವೆ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್** : ಮೈಸೂರಿನ ವಿಜಯನಗರ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಹಿಂದೆ Forst Grade College ಗಳಿಗೆ building grant ಏನು release ಆಯಿತು, ಅದೆಲ್ಲಾ ಲೋಕೋಪಯೋಗಿ ಇಲಾಖೆಯ ಮುಖಾಂತರ ಕಟ್ಟಡ ನಿರ್ಮಾಣ ವಾಗಬೇಕೆಂದು ಈ ಪ್ರಕ್ರಿಯೆ ಪ್ರಾರಂಭವಾಗಿ estimate ಗಳಾಗಿ tender ಕೂಡ ಕರೆದರು. ಇನ್ನೇನು agency fix ಆಗಬೇಕು ಎನ್ನುವ ಹಂತದಲ್ಲಿ ಇದ್ದಕ್ಕಿದ್ದ ಹಾಗೆ ಉನ್ನತ ಶಿಕ್ಷಣ ಸಚಿವರು ಎಲ್ಲಾ ಕಾಮಗಾರಿಗಳನ್ನು RITES ಎನ್ನುವ ಕೇಂದ್ರ ಸರ್ಕಾರದ ಸಂಸ್ಥೆಗೆ ವಹಿಸಿದರು. again ಅವರು ಏನು

ಮಾಡಿದರು, ಮತ್ತೆ ಪ್ರಾರಂಭದಿಂದ estimate ಮಾಡಿ approval ತೆಗೆದುಕೊಂಡು tender ಮಾಡಿ soil test ಮಾಡಿ ಮತ್ತೆ ಮಾಡುವುದಕ್ಕೆ ಎರಡು ವರ್ಷ ಹಿಡಿಯಿತು. ಸರ್ಕಾರದ ಯೋಜನೆ ಹೇಗೆ ಆಗಿದೆ ಎಂದರೆ, ಹಣ ಇದ್ದು First Grade College ಗಳ ಕಟ್ಟಡಗಳು ವಿನಾ ಕಾರಣ ಎರಡು ವರ್ಷ ಮುಂದಕ್ಕೆ ಹೋದವು. ಇದರ ಪರಿಣಾಮ ಏನಾಗಿದೆ ಎಂದರೆ, escalation cost ಜಾಸ್ತಿಯಾಗಿ ಕಟ್ಟಡದ ಪ್ರಮಾಣದಲ್ಲಿ 4 ಕೊಠಡಿ ಕಟ್ಟುವ ಕಡೆ 2 ಕೊಠಡಿ ಕಟ್ಟುವ ಸ್ಥಿತಿಗೆ ಬಂತು. ಇದು ಆಡಳಿತದಲ್ಲಿ ಆದಂಥ ಕೆಲವು ಬದಲಾವಣೆಗಳಿಂದ ಈ ರೀತಿ ವಿಳಂಬವಾಗಿದೆ. ಇದು ವಾಸ್ತವವಾದ ವಿಚಾರ. ಇನ್ನು ಮುಂದೆಯಾದರೂ ಅವುಗಳನ್ನು ಆದಷ್ಟು ಬೇಗನೆ ಕಟ್ಟಿಸಿ ಪ್ರಾರಂಭಿಸುವುದಕ್ಕೆ ತಾವು ಹೇಳಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಕಟ್ಟಡ ಕಟ್ಟುವುದಕ್ಕೆ ನಾವು ಸೂಚಿಸಿದ್ದೇವೆ.

**ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆ**

**39 (720) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) :** ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿ ಮತ್ತು ತೊಂಡೇಬಾವಿಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯಲು ತೆಗೆದುಕೊಂಡಿರುವ ಕ್ರಮಗಳೇನು;

ಆ) ಗೌರಿಬಿದನೂರಿನಲ್ಲಿ ಈ ಪದವಿ ಪೂರ್ವ ಕಾಲೇಜುಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ಥಾಪನೆ ಮಾಡುವುದು ಅಗತ್ಯವಾಗಿರುವುದರಿಂದ ಈ ಕಾಲೇಜು ಸ್ಥಾಪನೆ ಬಗ್ಗೆ ಸರ್ಕಾರವು ಆಸಕ್ತಿ ವಹಿಸಿರುವುದೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :**

ಅ) ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿ ಮತ್ತು ತೊಂಡೇಬಾವಿ ಗ್ರಾಮಗಳಲ್ಲಿ ತಲಾ ಒಂದೊಂದು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯುವ ಅಗತ್ಯತೆ ಕಂಡು ಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.